ದಿನಾಂಕಃ 25-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಎನ್ ಎ ಆರ್ ವಕೀಲರಿಂದ

ವಾದಿಗಳ ಹಳ್ಳಿಗೂ ನಮ್ಮ ಜಮೀನಿಗೂ ಅರ್ಧ ಕಿ. ಮೀ. ಅಂತರ ಇರುತ್ತದೆ. ಕೃಷ್ಣಪ್ಪ, ನಾಗಮ್ಮ, ಅಮೃತ ಇವರು ನನಗೆ ಸಂಬಂಧ ಇರುವುದಿಲ್ಲ. ಶಿವಣ್ಣ ನಮ್ಮ ಊರಿನವರು. ಕೃಷ್ಣಪ್ಪನಿಗೆ 20 ಎಕರೆ ಜಮೀನು ಇದೆ ಅಂತ ಹೇಳಿದ್ದು ಆ ಜಮೀನಿಗೆ ಇರುವ ದಾಖಲೆ ನೋಡಿರುತ್ತೀರಾ ಎಂದರೆ ದಾಖಲೆ ನೋಡಿರುವುದಿಲ್ಲ. ಕೃಷ್ಣಪ್ಪನ ಹೆಸರಿನಲ್ಲಿ ಯಾವುದಾದರೂ ಜಮೀನು ಇದೆಯಾ ಎಂದರೆ ಅದು ನಾನು ನೋಡಿರುದಿಲ್ಲ ಗೊತ್ತಿರುವುದಿಲ್ಲ. ಸರ್ವೆ ನಂಬರ್ ಅಳತೆ ನನಗೆ ಗೊತ್ತಿರುವುದಿಲ್ಲ. ಆ ಜುಮೀನಿನಿಂದ ಎಷ್ಟು ಸಂಪಾಧನೆ ಬರುತ್ತಿತ್ತು ಅಂತ ನನಗೆ ಗೊತ್ತಿರುವುದಿಲ್ಲ. ಶಿವಣ್ಣನಿಗೆ ಎಷ್ಟು ಸಂಪಾದನೆ ಬರುತ್ತದೆ ಎಂದರೆ ಗೊತ್ತಿರುವುದಿಲ್ಲ. ಶಿವಣ್ಣನಿಗೆ ಇರುವ ಟ್ರಾಕ್ಟರ್ ನಂಬರ್ ಗೊತ್ತಿರುವುದಿಲ್ಲ. ಶಿವಣ್ಣ ಮತ್ತು ಶಿವಣ್ಣನ ಹೆಂಡತಿ ಅಲ್ಲೆ ಕಷ್ಟಪಟ್ಟು ಮನೆಕಟ್ಟಿಸಿಕೊಂಡಿರುತ್ತಾರೆ. ಮನೆಕಟ್ಟಿ 5 ವರ್ಷ ಆಗಿರುತ್ತದೆ. ಮನೆ ಕಟ್ಟಲು ಎಷ್ಟು ಖರ್ಚಾಗಿರುತ್ತದೆ ಎಂದರೆ 2,40,000/ ಆಗಿರುತ್ತದೆ. ಹಣವನ್ನು ನಾಗಮ್ಮನಿಗೆ ಕೊಟ್ಟಿರುತ್ತಾರೆ. 2018 ರಲ್ಲಿ ಕ್ರಯ ಮಾಡಿಕೊಟ್ಟಾಗ ಕೊಟ್ಟಿರುತ್ತಾರೆ ಆ ಪತ್ರಕ್ಕೆ ನೀವು ಸಾಕ್ಷಿಯಾಗಿ ಸಹಿ ಹಾಕಿರುತ್ತೀರಾ ಎಂದರೆ ಇಲ್ಲ. ಯಾವ ನಂಬರ್ ನಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಮನೆ ಕಟ್ಟುವ ಮೊದಲು ವಾದಿಗಳು ಗ್ಯಾಳ್ಳಹಳ್ಳಿಯಲ್ಲಿ ವಾಸ ಇದ್ದರು. ದಾವಾ ಸ್ವತ್ತು 10/53. ನಾಗಮ್ಮನವರು ನನ್ನ ಹೆಸರಿನಲ್ಲಿ ಇದ್ದು ನನ್ನ ಮಗಳಿಗೆ ಮಾಡಿಕೊಡುತ್ತೇನೆ ಎಂದು ಹೇಳಿರುತ್ತಾರ ನಾಗಮ್ಮ ಆಸ್ತಿಯನ್ನು ಭಜಂತ್ರಿಯವರಿಂದ ತೆಗೆದುಕೊಂಡಿರುತ್ತಾರೆ. ನಾಗಮ್ಮನ ಸ್ವಯಾರ್ಜಿತ ಆಸ್ತಿಯಾಗಿದ್ದು ಅಮೃತ ರವರಿಗೆ ಕ್ರಯ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ ಆ ಕ್ರಯ ಪತ್ರಕ್ಕೆ ನೀವು ಹೋಗಿರುವುದಿಲ್ಲ ಸಾಕ್ಷಿ ಯಾಗಿರುವುದಿಲ್ಲ ಎಂದರೆ ನಮ್ಮ ಬಳಿ ಬಂದಿದ್ದು ನಾವು ಅದನ್ನು ತೀರ್ಮಾನ ಮಾಡಿರುತ್ತೇವೆ. ಅಮೃತ ಮತ್ತು ಆಕೆಯ ಗಂಡ ನಾಗಮ್ಮನ ಮನೆಯಲ್ಲಿ ಇರುತ್ತಾರೆ. ಅವರಿಗೆ ಮನೆ ಇದ್ದುದ್ದರಿಂದ ಹೊಸ ಮನೆ ಕಟ್ಟಿಸುವ

ಅವಕಾಶ ಇರುವುದಿಲ್ಲ ಎಂದರೆ ಗುಡಿಸಲು ಮನೆ ಇದ್ದು ಕಟ್ಟಿಸಿರುತ್ತಾರೆ. 20 ವರ್ಷಗಳಿಂದ ಮನೆ ಇದ್ದು ಹೊಸದಾಗಿ ಮನೆ ಕಟ್ಟಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ನೀವು ಹೇಳಿದಂತೆ ಯಾವುದೇ ಕ್ರಯ ಪತ್ರ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಪತ್ರವನ್ನು ನೀವು ನೋಡಿರುವುದಿಲ್ಲ ಎಂದರೆ ಸರಿಯಲ್ಲ ಶಿವಣ್ಣ ಮತ್ತು ಅಮೃತ ಗೆ ವಿಶ್ವಾಸ ಇರುವುದರಿಂದ ಸುಳುಳ ಸಾಕ್ಷ್ಯ ನುಡಿಯುತ್ತಿದ್ದಿಃರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

ದಿನಾಂಕಃ 25-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಎನ್ ಎ ಆರ್ ವಕೀಲರಿಂದ

ವಾದಿಗಳ ಹಳ್ಳಿಗೂ ನಮ್ಮ ಹಳ್ಳಿಗೆ 5 ಕಿ. ಮೀ. ಅಂತರ ಇರುತ್ತದೆ. ಅಮೃತ ಇವರು ನಿಮಗೆ ಏನು ಸಂಬಂಧ ಎಂದರೆ ಸಂಬಂಧ ಇರುವುದಿಲ್ಲ ಒಂದೇ ಜಾತಿಯವರು. ಅಮೃತ ಮತ್ತು ಶಿವಣ್ಣ ನವರು ಒಂದೇ ಊರಿನವರು ಎಂದರೆ ಸರಿ. ಕೃಷ್ಣಪ್ಪನ ಹೆಸರಿನಲ್ಲಿ ಎಷ್ಟು ಜಮೀನು ಇದೆ ಅಂತ ಗೊತ್ತಿಲ್ಲ, ಆದರೆ ಒಂದು ಜಮೀನು ಇರುತ್ತದೆ. ಕೃಷ್ಣಪ್ಪನ ಹೆಸರಿನಲ್ಲಿ ಯಾವ ಜಮೀನು ಇದೆ ಗೊತ್ತಿರುವುದಿಲ್ಲ. ಕೃಷ್ಣಪ್ಪನ ಹೆಸರಿನಲ್ಲಿ ಇರುವ ಜಮೀನುಗಳಲ್ಲಿ ಎಷ್ಟು ಸಂಪಾದನೆ ಬರುತ್ತದೆ ಎಂದು ಗೊತ್ತ ಎಂದರೆ ಗೊತ್ತಿರುವುದಿಲ್ಲ. ಕೃಷ್ಣಪ್ಪನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಜಮೀನುಗಳು ಇವೆ ಆದರೆ ಯಾರ ಹೆಸರಿನಲ್ಲಿ ಇದೆ ಅಂತ ಗೊತ್ತಿರುವುದಿಲ್ಲ. ಕೃಷ್ಣಪ್ಪನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲದೆ ಇದ್ದರೂ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅವರ ಮನೆಯನ್ನು ನೋಡಿರುವುದಿಲ್ಲ ಎಂದರೆ ನೋಡಿರುತ್ತೇನೆ.

ಕೃಷ್ಣಪ್ಪ ಮತ್ತು ನಾಗಮ್ಮ ನವರು ಜಮೀನು ಮಾಡಿಕೊಡುತ್ತೇವೆ ಅಂತ ನನ್ನ ಅಣ್ಣ ರಂಗಪ್ಪನ ಹತ್ತಿರ ಬಂದಿರುತ್ತಾರೆ. ನಾಗಮ್ಮನ ಜಮೀನನ್ನು ಯಾರಿಂದ ಎಷ್ಟಕ್ಕೆ ಕೊಂಡುಕೊಂಡಿರುತ್ತಾರೆ ಅಂತ ಗೊತ್ತಿಲ್ಲ. ನಾಗಮ್ಮ ಅದನ್ನು ತೆಗೆದುಕೊಂಡಿದ್ದು ಅದು ಅವರ ಸರ್ಯಾರ್ಜಿತ ಆಸ್ತಿ. ಜಮೀನಿಗೆ ಪಿ ನಂಬರ್ ಇದ್ದುದ್ದರಿಂದ ನೊಂದಣಿಯಾಗುವುದಿಲ್ಲ ಅಂತ ಹೇಳಿ ಹಕ್ಕು ಬಿಡುಗಡೆ ಮಾಡಿಸಿಕೊಂಡಿರುತ್ತಾರೆ. ಆ ಪತ್ರಕ್ಕೆ ನೀವು ಸಾಕ್ಷಿಯಾಗಿ ಸಹಿ ಹಾಕಿರುತ್ತೀರಾ ಎಂದರೆ ಹಾಕಿರುವುದಿಲ್ಲ ಹಣವನ್ನು ನಮ್ಮ ಊರಿನಲ್ಲಿ ಕೊಟ್ಟಿರುತ್ತಾರೆ. ನಿಮ್ಮ ಊರಿಗೆ ಅವರು ಬಂದಿರುವುದಿಲ್ಲ, ಹಣ ಕೊಟ್ಟಿರುವುದಿಲ್ಲ ಅವರು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅಮೃತ ರವರು ಮತ್ತು ನೀವು ಒಂದೇ ಊರಿನವರಾಗಿರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ವಾದಿಗಳೇ ಸ್ವಾಧೀನ ಇರುತ್ತಾರೆ ಎಂದರೆ

ಸರಿಯಲ್ಲ. ಪ್ರತಿವಾದಿಗಳೇ ಸ್ವಾಧೀನ ಇರುತ್ತಾರೆ. ನಿಜವಾಗಿಯಾ ನೀವು ಹೋಗಿದ್ದರೆ ಸಾಕ್ಷಿದಾರರಾಗಿ ಸಹಿ ಹಾಕುತ್ತಿದ್ದೀರಿ ಶಿವಣ್ಣನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಮೃತ ರವರಿಗೆ ಯಾವುದೇ ಸಂಪಾಧನೆ ಇರಲಿಲ್ಲ ಎಂದರೆ ಸರಿಯಲ್ಲ ಟ್ರಾಕ್ಟರ್ ಇದ್ದು ಅದರ ನಂಬರ್ ಗೊತ್ತಿರುವುದಿಲ್ಲ.

ನಾಗಮ್ಮನಿಗೆ 5 ಜನ ಮಕ್ಕಳು. ಅಮೃತ ಬಿಟ್ಟು ನಾಗಮ್ಮ ಮತ್ತು ಉಳಿಕೆ ಮಕ್ಕಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ರೀತಿಯಲ್ಲಿ ಮನೆ ಕಟ್ಟಿಕೊಟ್ಟಿರುವುದಿಲ್ಲ ಅವರು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಮ್ಮ ಊರಿನವರಾದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.